<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.</u>
<u>ಸಿ.ಸಿ.ನಂಬರ **911/2023**</u>

<u>ಫಿರ್ಯಾದಿ</u> ಶ್ರೀಮತಿ ಫಾಮೀದಾ ಕೋಂ ಹಸನಮೀಯಾ ನರೇಗಲ್
ವಯಾಃ **36** ವರ್ಷ, ಉದ್ಯೋಗಃ ಬ್ಯೂಟಿಪಾರ್ಲರ
ಸಾಃ ಬಸವೇಶ್ವರ ನಗರ, **9** ನೇ ಕ್ರಾಸ ಹಾವೇರಿ

ವಿರುದ್ಧ

<u>ಆರೋಪಿ</u> ಶ್ರೀಮತಿ ರೇಖಾ ಕೋಂ ರಮೇಶ ಕೋಟಕ್
ವಯಾಃ **55** ವರ್ಷ, ಉದ್ಯೋಗಃ ವ್ಯಾಪಾರ
ಸಾಃ ಬಸವೇಶ್ವರ ನಗರ ಬಿ ಬ್ಲಾಕ **2** ನೇ ಕ್ರಾಸ
ಹಾವೇರಿ ತಾಃಜಿಃ ಹಾವೇರಿ

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಅಡಿಯಲ್ಲಿ ಆರೋಪಿತನ ಹೇಳಿಕೆ</u>

ಪ್ರಶ್ನೆ.-1 ಈ ಪ್ರಕರಣದಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷವನ್ನು ನೀವು ತಿಳಿದುಕೊಂಡಿದ್ದೀರಾ?

ಉತ್ತರಃ

ಪ್ರಶ್ನೆ.-2 ಪ್ರಾಸಾ-1/ಪಿರ್ಯಾದಿರವರು ತಮ್ಮ ಸಾಕ್ಷಿಯಲ್ಲಿ ಆರೋಪಿಯಾದ ನೀವು ಪಿರ್ಯಾದಿಗೆ ತುಂಬಾ ಪರಿಚಯ ಇದ್ದು ಆರೋಪಿಯಾದ ನೀವು ನಿಮ್ಮ ವ್ಯಾಪಾರದ ಅಭಿವೃದ್ಧಿ ಸಲುವಾಗಿ ಮತ್ತು ನಿಮ್ಮ ಮನೆತನದ ಅಡಣಚಣೆಯ ಸಲುವಾಗಿ ಪಿರ್ಯಾದಿಯಿಂದ ಹಾವೇರಿ ಶಹರದಲ್ಲಿ ಪಿರ್ಯಾದಿದಾರಳ ಮನೆಯಿಂದ ಒಟ್ಟು ರೋಖ ರೂ.6,00,000/- ಗಳನ್ನು ಆದಷ್ಟು ಬೇಗನೇ ಮುಟ್ಟಿಸುವದಾಗಿ ಹೇಳಿ ಪಡೆದಿರುತ್ತೀರಿ ಎಂದು ಎಂದು ಸಾಕ್ಷವನ್ನು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ.-3 ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು ಕರಾರಿನ ಪ್ರಕಾರ ಸಾಲದ ಹಣವನ್ನು ಪಾವತಿಸದೇ ಇದ್ದು, ಆಗ ಹಣವನ್ನು ಮರುಪಾವತಿ ಮಾಡುವಂತೆ ಪಿರ್ಯಾದಿಯು ಕೇಳಿದಾಗ ಆರೋಪಿತರಾದ ನೀವು ಪಿರ್ಯಾದಿಗೆ ದೇನಾ ಬ್ಯಾಂಕ, ಹಾವೇರಿ ಶಾಖೆ ಚೆಕ ನಂಬರಃ 245258 ನೇದ್ದನ್ನು ಪಿರ್ಯಾದಿಯ ಹೆಸರಿಗೆ ಕೊಟ್ಟಿರುವದಾಗಿ ಸಾಕ್ಷವನ್ನು ನುಡಿದು, ಚೆಕ್ಕನ್ನು ನಿ.ಪಿ-1 ಎಂದು ಗುರುತಿಸಿಕೊಂಡಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ.-4 ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನೀಡಿದ ಚೆಕ್ಕನ್ನು ಪಿರ್ಯಾದಿಯು ತಾನು ಖಾತೆ ಹೊಂದಿದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಶಾಖೆಗೆ ದಿನಾಂಕಃ 18.10.2021 ರಂದು

ಚೆಕ್ಕನ್ನು ನಗದೀಕರಣಕ್ಕೆ ಚೆಕ್ಕನ್ನು ಹಾಜರುಪಡಿಸಿದ್ದು, ಸದರಿ ಚೆಕ್ಕು "ಆರೋಪಿತಳ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ"ಎಂದು ಅನಾಧಾರಣಗೊಂಡು ದಿನಾಂಕಃ 19.10.2025 ರಂದು ಹಿಂಬರಹದೊಂದಿಗೆ ವಾಪಾಸಾಗಿರುತ್ತದೆ ಎಂದು ಸಾಕ್ಷವನ್ನು ನುಡಿದು, ಬ್ಯಾಂಕಿನ ಹಿಂಬರಹವನ್ನು ನಿ.ಪಿ-2 ಎಂದು ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ 5 ಪ್ರಾ.ಸಾ-1 ರವರು ತಮ್ಮ ಸಾಕ್ಷದಲ್ಲಿ ಮುಂದುವರೆದು ಆರೋಪಿಯಾದ ನಿಮಗೆ ಚೆಕ್ಕು ಅನಾಧಾರಣಗೊಂಡ ಬಗ್ಗೆ ತಿಳಿಸಿದರೂ, ಯಾವುದೇ ಪ್ರತಿಕ್ರಿಯೆ ನೀಡಿರುವದಿಲ್ಲ, ನಂತರ ದಿನಾಂಕಃ 17..1.2021 ರಂದು ವಕೀಲರ ಮೂಲಕ ನೋಟಿಸನ್ನು ನೊಂದಣಿ ಅಂಚೆ ಮೂಲಕ ನೋಟಿಸ ನೀಡಿದ್ದರೂ, ಅದು ಜಾರಿಯಾಗಿದ್ದರೂ, ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವದಿಲ್ಲ ಅಥವಾ ಮರುತ್ತರವನ್ನು ನೀಡಿರುವದಿಲ್ಲ, ಆರೋಪಿ ತನ್ನ ಖಾತೆಯಲ್ಲಿ ಸಾಕಷ್ಟು ಹಣವನ್ನು ಜಮಾ ಮಾಡದೇ ಮೋಸ ಮಾಡಿದ್ದು, ಆ ಕಾರಣ ಈ ದೂರನ್ನು ದಾಖಲಿಸಲಾಗಿದೆ ಎಂದು ಸಾಕ್ಷವನ್ನು ನುಡಿದು, ನೋಟಿಸಿನ ಪ್ರತಿಯನ್ನು ನಿ.ಪಿ-3 ಎಂದು, ಅಂಚೆ ರಶೀದಿಯನ್ನು ನಿ.ಪಿ-4 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿ.ಪಿ-5 ಎಂದು ಗುರುತಿಸಿಕೊಂಡಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ.-6 ನೀವು ಏನಾದರೂ ಹೇಳುವುದು ಇದೆಯಾ?

ಉತ್ತರಃ

ಪ್ರಶ್ನೆ.-7 ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುತ್ತೀರಾ?

ಉತ್ತರಃ

(ಮೇಲೆ ಹೇಳಿದ ಆರೋಪಿಯ ಹೇಳಿಕೆಗಳನ್ನು ಅವರಿಗೆ ಗೊತ್ತಿರುವ ಭಾಷೆಯಲ್ಲಿ ಅವರಿಗೆ ಓದಿ ಹೇಳಲಾಯಿತು ಮತ್ತು ಆರೋಪಿಯು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು).

ಹಾವೇರಿ. **(ಮಹಮ್ಮದ ಅನ್ವರ ಹುಸೇನ ಮೊಗಲಾನಿ)**
ದಿನಾಂಕಃ**27.10.2025** ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯ ಸಹಿಃ